**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**<u>ಸಿ. ಸಿ. ನಂ.891/2024</u>**

<u>ಪಿರ್ಯಾಧಿದಾರರುಃ</u> ಶ್ರೀ ಗಣೇಶ ಸಿ., ಬಿನ್ ಚಂದ್ರಶೇಖರ, 23 ವರ್ಷ, ಕಾರ್ಯನಿರ್ವಹಣಾ ಅಧಿಕಾರಿ, ಮಲೆನಾಡು ಶಿಕ್ಷಕ ವಿವಿದ್ದೋದ್ದೇಶ ಸೌಹಾರ್ದ ಸಹಕಾರ ನಿಯಮಿತ (ರಿ), ಸಂಗೀತ ಕಾಂಪ್ಲೆಕ್ಸ್ ನೆಲಮಹಡಿ, ತಿಲಕ್ ರಸ್ತೆ, ಕೊಪ್ಪ ಅಂಚೆ ಮತ್ತು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**-ವಿರುದ್ಧ -**

<u>ಆರೋಪಿಃ</u> ಶ್ರೀ ಮಲ್ಲಿಕ್ ಎಲ್ ಬಿನ್ ಲೋಕೇಶ್, 27 ವರ್ಷ, ಕೊಡಚಾದ್ರಿ ಚೀಟ್ ಫಂಡ್ ನಲ್ಲಿ ಉದ್ಯೋಗಿ, ವಾಸ 432, ರಾಘವೇಂದ್ರ ನಗರ, ಹರಂದೂರು ಗ್ರಾಮ, ಕೊಪ್ಪ ಅಂಚೆ ಮತ್ತು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**<u>ಆರೋಪಣೆ</u>**

ಆರೋಪಿಯಾದ ನೀವು ದಿನಾಂಕ 18.10.2023 ರಂದು ರೂ. 2,00,000/- ಗಳ ಸಾಲವನ್ನು ಪಿರ್ಯಾದಿದಾರರ ಸಂಸ್ಥೆಯಿಂದ ಪಡೆದುಕೊಂಡಿದ್ದು, ಸದರಿ ಸಾಲದ ಹಣದ ಮರುಪಾವತಿಗಾಗಿ ನೀವು ನಿಮ್ಮ ಬಾಬ್ತು ಅವರಿಗೆ ರೂ. 2,11,161/- ಚೆಕ್ ನಂ. 016548, ದಿನಾಂಕ 05.07.2024 ನ್ನು ನಮೂದಿಸಿದ ಆ್ಯಸ್ಸಿಸ್ ಬ್ಯಾಂಕ್, ಬೆಂಗಳೂರು ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಅವರು ಸದರಿ ಚೆಕ್ಕನ್ನು ಸಿ.ಡಿ.ಸಿ.ಸಿ. ಬ್ಯಾಂಕ್, ಕೊಪ್ಪ ಶಾಖೆಗೆ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ "**ಸಾಕಷ್ಟು ಹಣ ಇಲ್ಲ**" ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 31.07.2024 ರಂತೆ ವಕೀಲರ ನೋಟೀಸು ನೀಡಿದ್ದು, ಸದರಿ ನೋಟೀಸು ದಿನಾಂಕ 01.08.2024 ರಂದು ನಿಮಗೆ ಜಾರಿಯಾಗಿದ್ದ್ಯೂ ಸಹ ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು .

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕ 19.11.2025.

ಸಹಿ/- 19.11.2025.

(ಶ್ರೀಮತಿ ನಂದಿನಿ ಎಂ.ಎನ್. )

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ.ದಂ., ಕೊಪ್ಪ